

# ಇದೆಲ್ಲಾ ಬೇಕಿತ್ತಾ ಸ್ಮಿತ್?

**ದಕ್ಷಿಣ ಆಫ್ರಿಕಾ ವಿರುದ್ಧದ ಮೂರನೇ ಟೆಸ್ಟ್ ಕ್ರಿಕೆಟ್ ಪಂದ್ಯದಲ್ಲಿ ಆಸ್ಟ್ರೇಲಿಯಾ ತಂಡದ ನಾಯಕ ಸ್ಟೀವನ್ ಸ್ಮಿತ್, ಉಪನಾಯಕ ಡೇವಿಡ್ ವಾರ್ನರ್ ಮತ್ತು ಕ್ಯಾಮರಾನ್ ಬ್ಯಾಂಕ್ರಾಫ್ಟ್ ಗೆಲುವಿಗೆ ಅಡ್ಡದಾರಿಯ ಯೋಜನೆ ರೂಪಿಸಿದ್ದು ಅವರ ಕ್ರಿಕೆಟ್ ಬದುಕಿಗೆ ಮುಳುವಾಗಿದೆ. ಆಸ್ಟ್ರೇಲಿಯಾ ಕ್ರಿಕೆಟ್ ಜಗತ್ತಿನ ಎದುರಿಗೆ ನಾಚಿಕೆಯಿಂದ ತಲೆ ತಗ್ಗಿಸುವಂತಾಗಿದೆ.**

■ **ಪ್ರಮೋದ್ ಜಿ.ಕೆ.**

ಆಸ್ಟ್ರೇಲಿಯಾದ ಕ್ರಿಕೆಟಿಗರು ಅಶಿಸ್ತಿನ ವರ್ತನೆ ತೋರಿ ಕ್ರಿಕೆಟ್ ಜಗತ್ತಿನ ಟೀಕೆಗೆ ಗುರಿಯಾಗಿದ್ದಾರೆ. ಚೆಂಡು ವಿರೂಪಗೊಳಿಸಿದ ಘಟನೆ ಇಷ್ಟು ದೊಡ್ಡ ಪೆಟ್ಟು ನೀಡುತ್ತದೆ, ವರ್ಷದ ನಿಷೇಧ ಶಿಕ್ಷೆಗೂ ಕಾರಣವಾಗುತ್ತದೆ ಎನ್ನುವ ಅಂದಾಜು ಆ ತಂಡದ ನಾಯಕರಾಗಿದ್ದ ಸ್ಟೀವನ್ ಸ್ಮಿತ್ ಮತ್ತು ಉಪನಾಯಕ ಡೇವಿಡ್ ವಾರ್ನರ್ ಅವರಿಗಿರಲಿಲ್ಲ ಎನಿಸುತ್ತದೆ.

ಕ್ರಿಕೆಟ್‌ನಲ್ಲಿ ಚೆಂಡು ವಿರೂಪಗೊಳಿಸುವ ಘಟನೆಗಳು ನಡೆಯುತ್ತಲೇ ಇರುತ್ತವೆ. ಆದರೆ ಈ ಘಟನೆ ಆಸ್ಟ್ರೇಲಿಯಾ ಕ್ರಿಕೆಟ್ ಮಂಡಳಿ ಮತ್ತು ಅಲ್ಲಿನ ಮಾಧ್ಯಮಗಳ ತೀವ್ರ ಆಕ್ರೋಶಕ್ಕೆ ಕಾರಣವಾಗಿದ್ದಕ್ಕೆ ಒಂದು ಕಾರಣವಿದೆ. ಭಾರತದಲ್ಲಿ ಹಾಕಿ ಹೇಗೆಯೋ, ಅದೇ ರೀತಿ ಆಸ್ಟ್ರೇಲಿಯಾದಲ್ಲಿ ಕ್ರಿಕೆಟ್ ರಾಷ್ಟ್ರೀಯ ಕ್ರೀಡೆ. ರಾಷ್ಟ್ರೀಯ ಕ್ರೀಡೆಗೆ ಅವಮಾನ ಮಾಡಿದರೆ ದೇಶಕ್ಕೆ ದ್ರೋಹ ಬಗೆದಂತೆ ಎನ್ನುವುದನ್ನು ಕಾಂಗರೂ ನಾಡಿನ ಕ್ರಿಕೆಟ್ ಪ್ರೇಮಿಗಳು ಗಟ್ಟಿಯಾಗಿ ನಂಬಿಕೊಂಡಿದ್ದಾರೆ.

ಕ್ರಿಕೆಟಿಗರನ್ನು ಅಲ್ಲಿನ ಜನ ಅಭಿಮಾನದಿಂದ ಕಾಣುತ್ತಾರೆ. 'ಮೋಸ ಮಾಡುವುದನ್ನು ಬಿಟ್ಟು ಗೆಲ್ಲಲು ಬೇರೆ ಏನು ಮಾಡಿದರೂ ನಾವು ಸಹಿಸಿಕೊಳ್ಳುತ್ತೇವೆ. ನಿಮ್ಮ ಮೇಲಿರುವ ನಂಬಿಕೆಗಳನ್ನು ಹುಸಿಗೊಳಿಸಬೇಡಿ' ಎಂಬುದು ಆಸ್ಟ್ರೇಲಿಯಾದ ಕಟ್ಟಾ ಕ್ರಿಕೆಟ್ ಪ್ರೇಮಿಗಳ ಮನವಿ.

ಆದರೆ, ಕಳೆದ ವಾರ ಕೇಪ್‌ಟೌನ್‌ನಲ್ಲಿ ನಡೆದ ದಕ್ಷಿಣ ಆಫ್ರಿಕಾ ವಿರುದ್ಧದ ಮೂರನೇ ಟೆಸ್ಟ್ ಕ್ರಿಕೆಟ್ ಪಂದ್ಯದಲ್ಲಿ ಚೆಂಡು ವಿರೂಪಗೊಳಿಸಿ ಮೋಸದ ಮೂಲಕ ಗೆಲುವಿಗೆ ತಂತ್ರ ರೂಪಿಸಿದ ಸತ್ಯ ಬಯಲಾಗುತ್ತಿದ್ದಂತೆಯೇ ಆಸ್ಟ್ರೇಲಿಯನ್ನರು ಕೆಂಡಾಮಂಡಲವಾದರು. ತಾವು ಪ್ರೀತಿಸಿದ, ಹಾರೈಸಿದ ಆಟಗಾರರ ವಿರುದ್ಧವೇ ತಿರುಗಿ ಬಿದ್ದರು. ಇದರಿಂದ ವಿಶ್ವ ಚಾಂಪಿಯನ್ ತಂಡದ ಆಟಗಾರರು ಮತ್ತು ಕ್ರಿಕೆಟ್ ಆಸ್ಟ್ರೇಲಿಯಾ ವಿಶ್ವ ಕ್ರಿಕೆಟ್‌ನ ಎದುರು ತಲೆತಗ್ಗಿಸಬೇಕಾಯಿತು.

## ಚೆಂಡು ವಿರೂಪ ಎಂದರೇನು?

ಇನಿಂಗ್ಸ್ ಆರಂಭಿಸಿದಾಗ ಸಿಗುವ ಹೊಸ ಚೆಂಡು ಪಂದ್ಯ ಆರಂಭದ ಕೆಲಹೊತ್ತಿನ ಬಳಿಕ ಬೌಲರ್‌ಗಳಿಗೆ ನೆರವಾಗಲಿ ಎನ್ನುವ ಉದ್ದೇಶದಿಂದ ಚೆಂಡಿನ ಒಂದು ಬದಿ ಮಾತ್ರ ಹೆಚ್ಚು ಬಳಕೆಯಾಗುವಂತೆ ಬೌಲರ್ ಹಾಗೂ ಫೀಲ್ಡರ್‌ಗಳು ನೋಡಿಕೊಳ್ಳುತ್ತಾರೆ. ಇನ್ನೊಂದು ಬದಿಯಲ್ಲಿ ಹೆಚ್ಚು ಸತ್ವ ಉಳಿದುಕೊಂಡರೆ ಚೆಂಡು ಬೇಗನೆ ರಿವರ್ಸ್ ಸ್ವಿಂಗ್ ಆಗುತ್ತದೆ ಎನ್ನುವುದು ಆಟಗಾರರ ಲೆಕ್ಕಾಚಾರ.

ಚೆಂಡು ಒರಟಾದ ಭಾಗಕ್ಕೆ ಸ್ಯಾಂಡ್ ಪೇಪರ್, ತಂಪು ಪಾನೀಯದ ಮುಚ್ಚಳ ಅಥವಾ ಉಗುರಿನಿಂದ ಉಜ್ಜಿ ಉದ್ದೇಶಪೂರ್ವಕವಾಗಿ ಚೆಂಡನ್ನು ವಿರೂಪಗೊಳಿಸುತ್ತಾರೆ. ಇದು ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಪ್ರಕಾರ ಕ್ರಿಕೆಟ್ ನಿಯಮಗಳಿಗೆ ವಿರುದ್ಧವಾದದ್ದು.



ಮಿಕೀ ಅರ್ಥರ್

ಫೀಲ್ಡಿಂಗ್ ಮಾಡುವ ತಂಡ ಯಾವುದೇ ಕಾರಣಕ್ಕೂ ಕೃತಕ ವಸ್ತು ಉಪಯೋಗಿಸಿ ಚೆಂಡು ಹೊಳಪು ಮಾಡುವಂತಿಲ್ಲ. ಇಬ್ಬನಿಯಿಂದ ಚೆಂಡು ಒದ್ದೆಯಾದರೆ ಟವಲ್ ಮೂಲಕ ಒಣಗಿಸಬಹುದು, ಅದನ್ನು ಅಂಪೈರ್ ಗಮನಕ್ಕೆ ತರಬೇಕಾಗುತ್ತದೆ.

ಅಷ್ಟಕ್ಕೂ ಆಸ್ಟ್ರೇಲಿಯಾ ತಂಡ ಚೆಂಡು ವಿರೂಪಗೊಳಿಸಿದ್ದು ಇದೇ ಮೊದಲೇನಲ್ಲ. ಹೋದ ವರ್ಷದ ಆ್ಯಷಸ್ ಟೆಸ್ಟ್ ಸರಣಿಯ ವೇಳೆ ಕ್ಯಾಮರೂನ್ ಬ್ಯಾಂಕ್ರಾಫ್ಟ್ ತಮ್ಮ ಜೇಬಿನಲ್ಲಿ ಸಕ್ಕರೆ ತುಂಬಿಕೊಳ್ಳುತ್ತಿರುವ ದೃಶ್ಯ ಡ್ರೆಸ್ಸಿಂಗ್ ಕೊಠಡಿಯಲ್ಲಿ ಸೆರೆಯಾಗಿತ್ತು. ಆಗಲೂ ಆಸೀಸ್ ಚೆಂಡು ವಿರೂಪಗೊಳಿಸಲು ಪ್ರಯತ್ನಿಸಿತ್ತು ಎಂದು ಇಂಗ್ಲೆಂಡ್ ತಂಡದ ಆಟಗಾರ ಸ್ಟುವರ್ಟ್ ಬ್ರಾಡ್ ಹೇಳಿದ್ದು, ಈಗ ಆಸ್ಟ್ರೇಲಿಯಾದ ಆಟಗಾರರ ಪ್ರಾಮಾಣಿಕತೆಯನ್ನೇ ಪ್ರಶ್ನಿಸುವಂತಿದೆ.

## ಚೆಂಡು ವಿರೂಪದ ಘಟನೆಗಳು

1990ರಲ್ಲಿ ಟೆಸ್ಟ್ ಪಂದ್ಯಗಳನ್ನು ನಿರ್ವಹಿಸಲು ಐಸಿಸಿ ರೆಫರಿಗಳು ಇರುತ್ತಿರಲಿಲ್ಲ. ಆಗ ಮೊದಲ ಬಾರಿಗೆ ಚೆಂಡು ವಿರೂಪಗೊಳಿಸಿದ ಘಟನೆ